# ಆಹಾ ಸುದ್ದಿ!

★ ಸಸಿತೋಟ



ಎಸ್ಟೋನಿಯಾದ ಒಟೆಪ ಪಟ್ಟಣದಲ್ಲಿ ಇತ್ತೀಚೆಗೆ ಸೌನಾ (ನೀರಿನ ಉಗಿ) ಸ್ನಾನದ ಮ್ಯಾರಥಾನ್ ನಡೆಯಿತು. ರಸ್ತೆ ಮಧ್ಯೆಯೇ ಅಲ್ಲಲ್ಲಿ ಒದಗಿಸಿದ ಸೌನಾದಲ್ಲಿ ಒಂದು ಸಾವಿರ ಮಂದಿ ಬಿಸಿ ನೀರಿನ ಹಬೆ ಸ್ನಾನದ ಸುಖ ಅನುಭವಿಸಿದರು. ದಾಖಲೆಗೋ, ಪ್ರಚಾರಕ್ಕೋ ಎಲ್ಲವೂ ಕಿರುತೆರೆಯ ಬದಲು ಬಯಲಿನಲ್ಲೇ ನಡೆಯುತ್ತಿವೆ.



ಜಪಾನಿನಲ್ಲಿ ರೋಗಿಯನ್ನು ಸ್ನಾನಕ್ಕೆ, ಗಾಲಿಕುರ್ಚಿಯಿಂದ ಮಂಚಕ್ಕೆ ಎತ್ತಿಕೊಂಡು ಹೋಗಲು ರೊಬಾಟ್ ಕರಡಿ 'ರೊಬೇರ್' ಸೃಷ್ಟಿಸಿದ್ದಾರಂತೆ. ಕಡಿಮೆಯಾದ ಜನನ ಪ್ರಮಾಣ, ಹೆಚ್ಚುತ್ತಿರುವ ದೀರ್ಘಾಯುಷಿಗಳ ಸಂಖ್ಯೆಯಿಂದ ಕಂಗೆಟ್ಟಿರುವ ಅಲ್ಲಿಯ ಸರ್ಕಾರ ಇಂತಹ ಸಂಶೋಧನೆಗಳ ಮೊರೆ ಹೋಗಿದೆ. ಈ ಯೋಜನೆಯಿಂದಾಗಿ ಜನಸಂಖ್ಯೆ ಬದಲು ರೊಬಾಟ್‌ಗಳ ಸಂಖ್ಯೆಯಾದರೂ ಜಾಸ್ತಿಯಾಗಬಹುದು.

ಬರ್ಮಿಂಗ್‌ಹ್ಯಾಮಿನ ಉಡುಪಿನ ಮಳಿಗೆಯೊಂದು ಆನ್‌ಲೈನ್‌ನಲ್ಲಿ ಮಾರಾಟಕ್ಕಿಟ್ಟ ಉಡುಪಿನ ಬಣ್ಣ ಈಗ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಯ ವಸ್ತುವಾಗಿದೆ. ನೀಲಿ ಉಡುಪಿನ ಮೇಲೆ ಕಪ್ಪು ಲೇಸ್ ಇದೆ ಎಂದು ಕೆಲವರು ವಾದಿಸಿದರೆ, ಇನ್ನು ಕೆಲವರು ಬಿಳಿ ಉಡುಪಿನ ಮೇಲೆ ಚಿನ್ನದ ವರ್ಣದ ಲೇಸ್ ಇದೆ ಎಂದು ಹೇಳುತ್ತಿದ್ದಾರಂತೆ. ಈ ಚರ್ಚೆಯಲ್ಲಿ ಪಾಪ್ ಗಾಯಕರು, ರಿಯಲಿಟಿ ಶೋ ನಟ- ನಟಿಯರು ಕೂಡಾ ಭಾಗವಹಿಸುತ್ತಿದ್ದು 'ಡ್ರೆಸ್‌ಗೇಟ್' ಎಂದೇ ಹೆಸರಾಗಿದೆ. ಮಳಿಗೆಯವರು ಮೋಸ ಮಾಡಿದ್ದಾರೋ ಅಥವಾ ಕಣ್ಣುಗಳೇ ಮೋಸ ಮಾಡುತ್ತಿವೆಯೋ?

ಇಟಲಿಯ ಶತಾಯುಷಿ ಎಮ್ಮಾ ಮೊರಾನೊ ಯೂರೋಪ್‌ನಲ್ಲೇ ಅತ್ಯಂತ ಹಿರಿಯಳು ಎಂಬ ಖ್ಯಾತಿ ಪಡೆದಾಕೆ. 115 ವರ್ಷ ವಯಸ್ಸಿನ ಈಕೆ ತನ್ನ ದೀರ್ಘಾಯುಷ್ಯದ ಗುಟ್ಟು ಬೇಯಿಸದ ಹಸಿ ಮೊಟ್ಟೆ ಹಾಗೂ ಒಂಟಿಯಾಗಿರುವುದು ಎಂದು ಹೇಳಿಕೊಂಡಿದ್ದಾಳಂತೆ. 1938ರಲ್ಲಿ ಗಂಡನಿಂದ ವಿಚ್ಛೇದನ ಪಡೆದ ಬಳಿಕ ಮತ್ತೆ ಮದುವೆಯಾಗುವಂತಹ ತಪ್ಪು ಆಕೆ ಮಾಡಿಲ್ಲವಂತೆ. ಇದುವರೆಗೆ ಸಮಾರು ಒಂದು ಲಕ್ಷ ಮೊಟ್ಟೆ ಸೇವಿಸಿದ್ದಾಳೆ ಎಮ್ಮಾ. ದೀರ್ಘಾಯುಷ್ಯದ ಬೆನ್ನು ಹತ್ತಿರುವವರು ಸರಿಯಾಗಿ ಕೇಳಿಸಿಕೊಳ್ಳಬಹುದು.



ಇಟಲಿಯ ಪಟ್ಟಣವೊಂದರಲ್ಲಿ ಜನ ವರ್ಷಕ್ಕೆ ಒಂದು ದಿನ ಮಧ್ಯಯುಗದ ಸೈನಿಕರ ವೇಷ ತೊಟ್ಟು ಹೊಡೆದಾಡುತ್ತಾರೆ. ವ್ಯತ್ಯಾಸ ಇಷ್ಟೇ, ಹಿಂದೆ ಬಿಲ್ಲು- ಬಾಣ, ಕತ್ತಿ ಹಿಡಿದು ಹೊಡೆದಾಡಿದರೆ, ಈಗ ಕಿತ್ತಳೆ ಹಣ್ಣುಗಳಿಂದ ಹೊಡೆದಾಡುತ್ತಾರೆ. ಹಿಂದೆ ರಕ್ತದ ಹೊಳೆ ಹರಿದರೆ, ಈಗ ರಸ್ತೆಯ ತುಂಬ ಕಿತ್ತಳೆ ರಸದ ಧಾರೆ.



ಬೆಲಾರಸ್‌ನ ಉಪ್ಪಿನ ಗಣಿಯೊಂದರಲ್ಲಿ ಉಸಿರಾಟ ಸಮಸ್ಯೆಗೆ ಚಿಕಿತ್ಸೆ ನೀಡಲಾಗುತ್ತಿದೆ. 420 ಮೀಟರ್ ಆಳದಲ್ಲಿರುವ ಖಾಲಿಯಾದ ಪೊಟ್ಯಾಸಿಯಂ ಮತ್ತು ಇತರ ಉಪ್ಪಿನ ಗಣಿಯಲ್ಲಿ ವರ್ಷಕ್ಕೆ 7000ಕ್ಕೂ ಅಧಿಕ ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರಂತೆ. ಗಣಿ ಖಾಲಿಯಾದರೇನಂತೆ, ಈ ರೀತಿ ಖಾಲಿ ಜೇಬು ತುಂಬಿಸಿಕೊಳ್ಳುವ ಗಣಿ ಮಾಲೀಕರ ಯೋಜನೆ ಮೆಚ್ಚತಕ್ಕಂಥದ್ದೇ.